A-PDF Merger DEMO : Purchase from www.A-PDF.com to remove the watermark

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013-14ನೇ ಸಾಲಿನಲ್ಲಿ ವಿಜಾಪುರ ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳಲ್ಲಿ ಉಳಿತಾಯವಾಗುವ ಅನುದಾನವನ್ನು ಧನಪುನರ್ ವಿನಿಯೋಗ ಮಾಡುವ ಬಗ್ಗೆ

ಓದಲಾಗಿದೆ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಾಪೂರ ಇವರ ಪತ್ರ ಸಂಖ್ಯೆ:ಜಿಪಂಹ/ಬಿಯುಡಿ-4/2225/ ಧನಪುನರ್ ವಿನಿಯೋಗ/2013-14 ದಿನಾಂಕ:20-01-2014

****

**ಪ್ರಸ್ತಾವನೆ:-**

ಮೇಲೆ ಓದಲಾದ ದಿನಾಂಕ:20-01-2014ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಾಪೂರ ಇವರು 2013-14ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಗಳಡಿ ಜಿಲ್ಲಾ ಪಂಚಾಯತ್ ಯೋಜನೇತರ ಅಡಿ ಉಳಿತಾಯವಾಗುವ ರೂ.20.13 ಲಕ್ಷಗಳ ಅನುದಾನವನ್ನು ಧನಪುನರ್ ವಿನಿಯೋಗ ಮಾಡಲು ಸರ್ಕಾರದ ಆದೇಶ ಹೊರಡಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 37 ಎಸ್‌ಎಲ್‌ಪಿ 2014, ಬೆಂಗಳೂರು ದಿನಾಂಕ:18-02-2014**

2013-14ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೇತರ ವಿವಿಧ ಲೆಕ್ಕಶೀರ್ಷಿಕೆಗಳಡಿ ಉಳಿತಾಯವಾಗುವ ರೂ.20.13 ಲಕ್ಷ (ರೂ. ಇಪ್ಪತ್ತು ಲಕ್ಷದ ಹದಿಮೂರು ಸಾವಿರಗಳು ಮಾತ್ರ)ಗಳ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಲೆಕ್ಕಶೀರ್ಷಿಕೆ | ಉಳಿತಾಯ ವಾಗುವ ಮೊತ್ತ | ಲೆಕ್ಕಶೀರ್ಷಿಕೆ | ಮರು ಹೊಂದಾಣಿಕೆ ಮೊತ್ತ |
|---|---|---|---|---|
| | ಯೋಜನೇತರ | | | |
| 1 | 2225-00-101-0-42 (101) (ಜಿ.ಪಂ.ಕಾರ್ಯಕ್ರಮ) ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ | 13.30 | 2225-00-101-0-30 (050) ಕಾರ್ಯನಿರ್ವಾಹಕ ಸಿಬ್ಬಂದಿ (ಜಿ.ಪಂ. ಯೋಜನೇತರ ನಿರ್ವಹಣೆ) | 10.00 |
| 2 | 2225-00-101-0-36 (001) ಸರ್ಕಾರಿ ಕಾಲೇಜು ವಿದ್ಯಾರ್ಥಿ ನಿಲಯಗಳು ಜಿ.ಪಂ.ಯೋಜನೇತರ | 6.83 | 2225-00-101-0-36 (050) ಸರ್ಕಾರಿ ಕಾಲೇಜು ವಿದ್ಯಾರ್ಥಿ ನಿಲಯಗಳು | 3.30 |

.....2)

| | | | | |
|---|---|---|---|---|
| 3 | – | – | 2225-00-101-0-32<br>(001) ಪ.ಜಾ.ವಿದ್ಯಾರ್ಥಿಗಳಿಗೆ<br>ನಿವಾಸಿ ಶಾಲೆಗಳು<br>ಜಿ.ಪಂ.ಯೋಜನೇತರ | 5.33 |
| 4 | – | – | 2225-00-101-0-47<br>(001) ಮಹಿಳೆಯರಿಗೆ ತರಬೇತಿ<br>ಕೇಂದ್ರಗಳು<br>ಜಿ.ಪಂ.ಯೋಜನೇತರ | 1.50 |
| | ಒಟ್ಟು | 20.13 | | 20.13 |

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇವರ ಟಿಪ್ಪಣಿ ಸಂಖ್ಯೆ:ಸಕಕಾ 30 ಆಂಆಸ 2014 ದಿನಾಂಕ:12-02-2014ರಲ್ಲಿ ನೀಡಿರುವ ಸಹಮತಿಯಂತೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 11 ಟಿಎಫ್‌ಪಿ 2007 ದಿನಾಂಕ:27-11-2007ರನ್ವಯ ಸರ್ಕಾರದ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಆರ್ಥಿಕ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ

ಗೆ:-

1) ಮಹಾಲೇಖಪಾಲರು, (ಲೆಕ್ಕ ಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಾಪೂರ
4) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ವಿಜಾಪೂರ
5) ಜಿಲ್ಲಾ ಖಜಾನಾಧಿಕಾರಿ, ವಿಜಾಪೂರ ಜಿಲ್ಲೆ
6) ಉಪನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು
7) ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-3 ಮತ್ತು 9), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು